ದಿ: 17/12/2012 ರಂದು ಶಿಕ್ಷಕರ ಸದನದಲ್ಲಿ ಸಹನಿದೇಶಕರು[ಶಾಲಾ ಶಿಕ್ಷಣ]ರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಎಲ್ಲಾ ಉಪನಿರ್ದೇಶಕರ (ಆಡಳಿತ) ಕಛೇರಿಯ ಪತ್ರಾಂಕಿತ ಸಹಾಯಕರು/ಪತ್ರಾಂಕಿತ ವ್ಯವಸ್ಥಾಪಕರವರ ಸಭೆಯ ನಡವಳಿ.

*****

ಹಾಜರಾಗಿದ್ದ ಅಧಿಕಾರಿಗಳು:-

1. ಸಹನಿರ್ದೇಶಕರು, (ಶಾಲಾ ಶಿಕ್ಷಣ), ಆಯುಕ್ತರ ಕಛೇರಿ
2. ಉಪನಿರ್ದೇಶಕರು[ಯೋಜನೆ], ಆಯುಕ್ತರ ಕಛೇರಿ – ಅನ್ಯ ಕಾರ್ಯನಿಮಿತ್ಯ ಗೈರು ಹಾಜರಿ
3. ಹಿರಿಯ ಸಹಾಯಕ ನಿರ್ದೇಶಕರು[ಯೋಜನೆ], ಆಯುಕ್ತರ ಕಛೇರಿ– ಅನ್ಯ ಕಾರ್ಯನಿಮಿತ್ಯ ಗೈರು ಹಾಜರಿ
4. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರ ಕಛೇರಿಯ ಪತ್ರಾಂಕಿತ ಸಹಾಯಕರು/ಪತ್ರಾಂಕಿತ ವ್ಯವಸ್ಥಾಪಕರು
5. ಅಧೀಕ್ಷಕರು, ಯೋಜನಾ ಶಾಖೆ, ಆಯುಕ್ತರ ಕಛೇರಿ
6. ಆಯುಕ್ತರ ಕಛೇರಿಯ ಯೋಜನಾ ಶಾಖೆ ಸಿಬ್ಬಂದಿ ವರ್ಗದವರು.

—

ಮಾನ್ಯ ಆಯುಕ್ತರ ಸೂಚನೆಯಂತೆ, ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರ ಮಾಸಿಕ ಪ್ರಗತಿ ಪರಿಶೀಲನಾ ಸಭೆಗೆ ಪೂರ್ವಭಾವಿಯಾಗಿ ಆ ಕಛೇರಿಗಳ ಪತ್ರಾಂಕಿತ ಸಹಾಯಕರು/ಪತ್ರಾಂಕಿತ ವ್ಯವಸ್ಥಾಪಕರ ಸಭೆಯನ್ನು ಕರೆದು ಅವರ ಹಂತದಲ್ಲಿ ವಿವರವಾದ ಪ್ರಗತಿ ಪರಿಶೀಲನೆಯನ್ನು ಕೈಗೊಂಡು, ಸದರಿ ಸಭೆಯಲ್ಲಿ ಹೊರಹೊಮ್ಮುವ ಅಂಕಿ ಅಂಶದ ಆಧಾರದ ಮೇಲೆ ಪರಾಮರ್ಶಿಸಿ ಯಾವ ಜಿಲ್ಲೆಯ ಪ್ರಗತಿಯು ತೃಪ್ತಿಕರವಾಗಿರುವುದಿಲ್ಲವೋ ಅಂತಹ ಜಿಲ್ಲೆಯ ಆ ಎಲ್ಲಾ ಸ್ಕೀಂಗಳ ಪ್ರಗತಿ ಪರಿಶೀಲನೆಯನ್ನು ಮುಂದಿನ ಹಂತದಲ್ಲಿ , ಉಪನಿರ್ದೇಶಕರ ಸಭೆಯಲ್ಲಿ , ಮಾನ್ಯ ಆಯುಕ್ತರು ಕೈಗೊಳ್ಳುತ್ತಾರೆ .

ಈ ನಿಟ್ಟಿನಲ್ಲಿ ಇದು 2ನೇ ಪತ್ರಾಂಕಿತ ಸಹಾಯಕರು/ಪತ್ರಾಂಕಿತ ವ್ಯವಸ್ಥಾಪಕರ ಸಭೆ . ಸಭೆಗೆ ಸಂಬಂಧಪಟ್ಟಂತೆ ಒಟ್ಟು 1 ರಿಂದ 30 ಕ್ರಮ ಸಂಖ್ಯೆಯ ವಿಷಯ ಸೂಚಿಗಳನ್ನು ನಿಗಧಿಪಡಿಸಲಾಗಿತ್ತು. ಆ ಎಲ್ಲಾ ವಿಷಯ ಸೂಚಿಗಳಿಗೆ ಸಂಬಂಧಪಟ್ಟಂತೆ ಜಿಲ್ಲಾ ಉಪನಿರ್ದೇಶಕರಿಂದ ದೃಢೀಕೃತಗೊಂಡಿದ್ದ, ಅಂಕಿ ಅಂಶಗಳನ್ನು ಸಭೆಯ ಮುಂದೆ ಸಂಬಂಧಿತ ಜಿಲ್ಲಾ ಉಪನಿರ್ದೇಶಕರ ಕಛೇರಿಯ ಪತ್ರಾಂಕಿತ ಸಹಾಯಕರು/ಪತ್ರಾಂಕಿತ ವ್ಯವಸ್ಥಾಪಕರ ಪ್ರಸ್ತುತ ಪಡಿಸಿದಂತೆ ಸುದೀರ್ಘವಾದ ಪ್ರಗತಿ ಪರಿಶೀಲನೆಯನ್ನು ಕೈಗೊಳ್ಳಲಾಗಿ ಕೆಳಗಿನ ಅಂಶಗಳನ್ನು ಗಮನಿಸಲಾಗಿದೆ ಮತ್ತು ಸೂಕ್ತವಾದ ನಡವಳಿಗಳನ್ನು ಅಂಗೀಕರಿಸಲಾಗಿದೆ .

ಅಜೆಂಡಾ–1ರ ಕುರಿತು :

✓ ಬಹುತೇಕ ಜಿಲ್ಲೆಗಳು ಈವರೆಗೆ 3ನೇ ಕಂತಿನ ಅನುದಾನವನ್ನು ಡ್ರಾ ಮಾಡಿರುವುದಿಲ್ಲ.

- ✓ ಸಭೆಯ ಸಂಧರ್ಭದಲ್ಲಿ ಒಮ್ಮತವಾಗಿ ಆ ಎಲ್ಲಾ ಅಧಿಕಾರಿಗಳು ಸಲ್ಲಿಸಿಕೊಂಡಂತೆ , ಇನ್ನು ಒಂದು ವಾರದೊಳಗೆ ಸದರಿ ಕಾರ್ಯಕ್ರಮದ 3ನೇ ತ್ರೈಮಾಸಿಕ ಅನುದಾನದ ಸಂಪೂರ್ಣ ಖರ್ಚನ್ನು ಭರಿಸಿ ಸಂಬಂಧಿತ ಎಸ್‌ಡಿಎಂಸಿ ಗಳಿಗೆ ಇಸಿಎಸ್ ಮುಖಾಂತರ ಹಣವನ್ನು ಬಿಡುಗಡೆ ಮಾಡಲಾಗುತ್ತದೆ.
- ✓ ಕೆಲವು ಜಿಲ್ಲೆಯ ಪತ್ರಾಂಕಿತ ವ್ಯವಸ್ಥಾಪಕರು ಸಿಟಿಎಸ್–8 ಬಿಲ್ಲಿನ ಮುಖಾಂತರ ಹಣ ಸೆಳೆಯಲಾಗುತ್ತಿದೆ ಎಂಬುದಾಗಿ ಮಾಹಿತಿ ಪ್ರಸ್ತುತಪಡಿಸಿದರು. ಆದರೆ , ಈಗಾಗಲೇ ಹಿಂದಿನ ಉಪನಿರ್ದೇಶಕರ ಸಭೆಯಲ್ಲಿಯೂ ಮತ್ತು ಪತ್ರಾಂಕಿತ ಸಹಾಯಕರ ಸಭೆಯಲ್ಲಿಯೂ ಸಿಟಿಎಸ್–8ರ ಮುಖಾಂತರ ಹಣ ಸೆಳೆಯುವುದರ ಬದಲಿಗೆ ಸಾಧ್ಯವಾದಷ್ಟು ಮಟ್ಟಿಗೆ ಡಿಸಿ ಬಿಲ್ಲು ಮುಖಾಂತರವಾಗಿ ಹಣ ಸೆಳೆಯುವುದು ಹೆಚ್ಚು ಪ್ರಸ್ತುತ ಎಂಬುದಾಗಿ ಸೂಚಿಸಲಾಗಿತ್ತು. ಈ ಅಂಶವನ್ನು ಮತ್ತೊಮ್ಮೆ ಸಭೆಯಲ್ಲಿ ಪುನರಾವರ್ತಿಸಲಾಯಿತು ಮತ್ತು ಡಿಸಿ ಬಿಲ್ಲಿನ ಮುಖಾಂತರವೇ ಹಣ ಸೆಳೆಯಲು ಮತ್ತೊಮ್ಮೆ ಸೂಚಿಸಲಾಯಿತು.
- ✓ ಇದೇ ಕಾರ್ಯಕ್ರಮ ಅನುಷ್ಠಾನದ ವಿಷಯದಲ್ಲಿ , ಸಂಬಂಧಿತ ಎಲ್ಲಾ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ವಿವರವಾದ ಸುತ್ತೋಲೆಯನ್ನು ನೀಡಿ, ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ಕಡ್ಡಾಯವಾಗಿ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿ, ತಪ್ಪಿದಲ್ಲಿ ಸಿಸಿಎ ನಿಯಮಾವಳಿಗಳನ್ನು ಎದುರಿಸಬೇಕಾಗಬಹುದು ಎಂಬುದನ್ನು ಸ್ಪಷ್ಟಪಡಿಸಲು ಎಲ್ಲಾ ಜಿಲ್ಲೆಗಳಿಗೆ ಸೂಚಿಸಲಾಯಿತು .
- ✓ ಉಡುಪಿ ಜಿಲ್ಲೆಗೆ ಸಂಬಂಧಪಟ್ಟಂತೆ ಕೆಲವು ಶಾಲೆಗಳು ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳದೇ ಕರ್ತವ್ಯ ನಿರ್ಲಕ್ಷ್ಯತೆ ತೋರಿರುವುದು ಇತ್ತೀಚಿನ ಸಹನಿರ್ದೇಶಕರು [ಶಾಲಾ ಶಿಕ್ಷಣ] ಇವರ ಭೇಟಿಯ ಸಂದರ್ಭದಲ್ಲಿ ಕಂಡು ಬಂದಿರುತ್ತದೆ. ಈ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಂಡು ಸದರಿ ಶಾಲಾ ಮುಖ್ಯೋಪಾಧ್ಯಯರುಗಳಿಗೆ ಸೂಕ್ತ ಚಿತಾವಣೆ ನೀಡಿ ಎಚ್ಚರಿಸಲು ಸೂಚಿಸಲಾಗಿದೆ.
- ✓ ಕಾರ್ಯಕ್ರಮದ ಅನುಷ್ಠಾನದ ವಿಷಯದಲ್ಲಿ ಕಾಲದಿಂದ ಕಾಲಕ್ಕೆ ಬ್ಲಾಕ್ ಹಂತದ ಮ್ಯಾನೇಜರ್‌ಗಳ ಸಭೆಯನ್ನು ಕರೆದು ಪ್ರಗತಿಯನ್ನು ಪರಿಶೀಲಿಸಲು ಸೂಚಿಸಲಾಗಿರುತ್ತದೆ.
- ✓ ಇದೇ ವಿಷಯದಲ್ಲಿ, ಉಪನಿರ್ದೇಶಕರ ಹಾಗೂ ಡಯಟ್ ಪ್ರಾಂಶುಪಾಲರ ಅಧ್ಯಕ್ಷತೆಯ ತಂಡಗಳು ಶಾಲೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಛಾಯಾ ಚಿತ್ರ ಸಹಿತ ವರದಿ ಮಾಡಲು ಜ್ಞಾಪನ ಹೊರಡಿಸಲಾಗಿತ್ತು . ಆದರೆ ಕೆಲವು ಜಿಲ್ಲೆಗಳಿಂದ ಮಾತ್ರವೇ ಅಂತಹ ವರದಿಗಳು ಸಲ್ಲಿಕೆಯಾಗಿವೆ . ಉಳಿದ ಎಲ್ಲಾ ಜಿಲ್ಲೆಗಳೂ ಈ ಬಗ್ಗೆ ಕ್ರಮ ಕೈಗೊಳ್ಳಲು ಆಸ್ಥೆ ವಹಿಸಲು ಮತ್ತೊಮ್ಮೆ ಮನವಿ ಮಾಡಲಾಯಿತು.

ಅಜೆಂಡಾ:–2–30 :

- ✓ ಸಿವಿಲ್ ಕಾಮಗಾರಿಗಳ ಕುರಿತಂತೆ , ಬಹುತೇಕ ವಿಷಯ ಸೂಚಿಗಳಿಗೆ ಸಂಬಂಧಪಟ್ಟಂತೆ ಆದ ಚರ್ಚೆಯಲ್ಲಿ ಕಂಡು ಬಂದ ಸಾಮಾನ್ಯ ಅಂಶವೆಂದರೆ , ಎಲ್ಲಿ ನಿವೇಶನದ ಗುರುತಿಸುವಿಕೆ, ನಿವೇಶನದ ವಹಿಸಿಕೊಳ್ಳುವಿಕೆ ಮತ್ತು ಸದರಿ ನಿವೇಶನದಲ್ಲಿ ಕಾಮಗಾರಿ ಪೂರೈಸಲು ಏಜೆನ್ಸಿಗೆ ಹಸ್ತಾಂತರಣ ಬಾಕಿ ಇದೆಯೋ ಅಂತಹ ಪ್ರಕರಣದಲ್ಲಿ

ಇಲಾಖೆಯ ಪರವಾಗಿ ಈವರೆಗೆ ಆರ್‌ಟಿಸಿ / ರೆವಿನ್ಯೂ ದಾಖಲೆಯನ್ನು ಪಡೆದುಕೊಂಡು ಕಾಮಗಾರಿ ಏಜೆನ್ಸಿಗೆ ಹಸ್ತಾಂತರಿಸುವ ಕಾರ್ಯ ಆಗಿರುವುದಿಲ್ಲ.

✓ ಹಾಗೆಯೇ , ಕಾಮಗಾರಿ ಏಜೆನ್ಸಿಗೆ ಕಾಮಗಾರಿಯನ್ನು ವಹಿಸುವ ಸಂಬಂಧ ಇತರೆ ಪ್ರಕ್ರಿಯೆಗಳಾದ ಎಸ್‌ಡಿಎಂಸಿ ನಡವಳಿ, ವ್ಯಾಪ್ತಿಯ ಜಿಲ್ಲಾ ಪಂಚಾಯತ್‌ನೊಂದಿಗೆ ಪೂರಕ ಪತ್ರ ವ್ಯವಹಾರ, ಏಜೆನ್ಸಿಯೊಂದಿಗೆ ಒಪ್ಪಂದ ಪತ್ರಿಕೆ ಇತ್ಯಾದಿಗಳನ್ನು ಸಹ ವ್ಯವಸ್ಥಿತವಾಗಿ ಪೂರೈಸಿರುವುದು ಕಂಡು ಬಂದಿಲ್ಲ.

✓ ಪ್ರಯುಕ್ತ, ಎಲ್ಲಿ ಹೊಸದಾಗಿ ನಿವೇಶನದ ಹಸ್ತಾಂತರವಾಗಿದೆ ಅಥವಾ ನಿಕಟೋತ್ತರ ಹಸ್ತಾಂತರಣವಾಗುತ್ತದೆ ಎಂಬ ಮಾಹಿತಿ ವ್ಯಕ್ತವಾಗಿರುತ್ತದೆಯೋ ಆ ಜಿಲ್ಲೆಗಳವರು ಸೂಕ್ತ ಆರ್‌ಟಿಸಿ/ಸಂಬಂಧಿತ ದಾಖಲೆಗಳ ಪ್ರತಿಗಳನ್ನು ಕಡ್ಡಾಯವಾಗಿ ಆಯುಕ್ತರ ಕಛೇರಿಯ ಯೋಜನಾ ಶಾಖೆಗೆ ಮಾಹಿತಿಗಾಗಿ ವರದಿ ಪತ್ರದ ಮುಖಾಂತರ ಸಲ್ಲಿಸಲು ನಡವಳಿಯನ್ನು ಕೈಗೊಳ್ಳಲಾಗಿರುತ್ತದೆ.

✓ ಎಲ್ಲಿ ಕಾಮಗಾರಿ ಪೂರ್ಣಗೊಂಡು ಹಸ್ತಾಂತರಣವಾಗಿದೆಯೋ , ಆ ಎಲ್ಲಾ ಕಾಮಗಾರಿಗಳ ಕುರಿತಂತೆ ಸೂಕ್ತವಾದ ಕಾಮಗಾರಿ ಪೂರೈಕೆ, ಕಾಮಗಾರಿ ಗುಣಾತ್ಮಕತೆ ಪ್ರಮಾಣೀಕರಣಗಳನ್ನು ಪಡೆದು ದೃಢೀಕರಿಸಿ ಕಡ್ಡಾಯವಾಗಿ ಆಯುಕ್ತರ ಕಛೇರಿಯ ಯೋಜನಾ ಶಾಖೆಗೆ ಮಾಹಿತಿಗಾಗಿ ವರದಿ ಪತ್ರದ ಮುಖಾಂತರ ಸಲ್ಲಿಸಲು ನಡವಳಿಯನ್ನು ಕೈಗೊಳ್ಳಲಾಗಿರುತ್ತದೆ.

✓ ಪೂರ್ಣಗೊಂಡ ಸದರಿ ಎಲ್ಲಾ ಕಾಮಗಾರಿಗಳ ಕುರಿತಾದ ಛಾಯಾ ಚಿತ್ರಗಳನ್ನು ಸಹ ಮೇಲಿನ ವರದಿಯೊಂದಿಗೆ ಲಗತ್ತಿಸಲು ಜಿಲ್ಲೆಗಳಿಗೆ ಸೂಚಿಸಲಾಗಿರುತ್ತದೆ.

✓ ಮೇಲಿನಂತೆ ಸೂಚಿಸಲಾಗಿರುವ ಎಲ್ಲಾ ದಾಖಲೆಗಳು, ಛಾಯಾ ಚಿತ್ರಗಳನ್ನು ದಿ: 21.12.2012ರ ಉಪನಿರ್ದೇಶಕರ ಸಭೆಯ ಸಂಧರ್ಭದಲ್ಲಿ ಆಯುಕ್ತರ ಕಛೇರಿಗೆ ಸಲ್ಲಿಸಲು ಕ್ರಮ ಕೈಗೊಳ್ಳುವಂತೆ ಎಲ್ಲಾ ಪತ್ರಾಂಕಿತ ಸಹಾಯಕರು/ಪತ್ರಾಂಕಿತ ವ್ಯವಸ್ಥಾಪಕರಿಗೆ ಸೂಚಿಸಲಾಗಿರುತ್ತದೆ.

✓ ತುಮಕೂರು ಜಿಲ್ಲೆಗೆ ಸಂಬಂಧಪಟ್ಟಂತೆ , ಅಜೆಂಡಾ–4ರ ವಿಷಯ ಸೂಚಿ ಕುರಿತು ಹಿಂದಿನ ಸಭೆಯ ಸಂದರ್ಭದಲ್ಲಿ ಪೂರ್ಣವಾಗಿದೆ ಎಂದು ಮಾಹಿತಿ ನೀಡಿ, ಇದೀಗ ಬಾಕಿ ಇದೆ ಎಂಬುದಾಗಿ ವರದಿ ಸಲ್ಲಿಕೆಯಾಗಿದೆ. ಯಾವುದೇ ಜಿಲ್ಲೆಯಿಂದ ಮಾಸಿಕ ಸಭೆಗಳಲ್ಲಿ ಸಲ್ಲಿಕೆಯಾಗುವ ಅಂಕಿ ಅಂಶ/ವರದಿಯು ಕರಾರುವಕ್ಕಾದ ವರದಿ ಆಗಿರಬೇಕು. ಇಲ್ಲವಾದಲ್ಲಿ ಪರಿಶೀಲನೆಗೆ ಯಾವುದೇ ಅರ್ಥಪೂರ್ಣತೆ ಇರುವುದಿಲ್ಲ ಎಂಬುದನ್ನು ಸಭೆಯ ಸಂದರ್ಭದಲ್ಲಿ ಒತ್ತಿ ತಿಳಿಸಲಾಯಿತು.

✓ ಕೆಲವು ಜಿಲ್ಲೆಗಳಿಂದ ಅನುದಾನದ ಬಿಡುಗಡೆ ಮಾದರಿ [ಮೋಡ್] ಯನ್ನು ತಾಂತ್ರಿಕ ಕಾರಣಗಳಿಗಾಗಿ "ಯು" ನಿಂದ "ಡಿ"ಗೆ ಮಾರ್ಪಡಿಸಲು ಕೋರಿಕೆ ಇದೆ. ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಲಾಗಿರುತ್ತದೆ.

- ✓ ಆರ್‌ಐಡಿಎಫ್ ಕಾಮಗಾರಿಗಳ ಕುರಿತಂತೆ, ಪ್ರಾಜೆಕ್ಟ್‌ವಾರು ಪಿಸಿಆರ್‌ಗಳನ್ನು ಹಾಗೂ ಕ್ಲೈಮುಗಳನ್ನು ತುರ್ತಾಗಿ ಸಲ್ಲಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲೆಗಳಿಗೆ ತಿಳಿಸಲಾಗಿರುತ್ತದೆ.
- ✓ ಅಜೆಂಡಾ–24ಕ್ಕೆ ಸಂಬಂಧಪಟ್ಟಂತೆ ಯಾವ ಕಾಮಗಾರಿಗಳನ್ನು ಕೈ ಬಿಡಲಾಗಿದೆಯೋ ಅಥವಾ ಈವರೆಗೆ ಪ್ರಾರಂಭಗೊಂಡಿರುವುದಿಲ್ಲವೋ ಅಂತಹ ಪ್ರಕರಣಗಳಲ್ಲಿ ಮತ್ತೊಮ್ಮೆ ಪರಿಶೀಲಿಸಿ ಯಾವ ಕಾರಣಕ್ಕಾಗಿ ಈ ಹಿನ್ನೆಡೆಯಾಗಿದೆ ಎಂಬುದನ್ನು ಪರಾಮರ್ಶಿಸಿ, ಕಾಮಗಾರಿ ಏಜೆನ್ಸಿಯ ವಿಳಂಬವಿದ್ದಲ್ಲಿ ಆಯಾ ಜಿಲ್ಲಾ ಪಂಚಾಯತ್‌ನ ಸಿಇಓ ರವರಿಗೆ ಕೋರಿ ಸದರಿ ಏಜೆನ್ಸಿ/ಅಭಿಯಂತರರಿಗೆ ನೋಟೀಸ್‌ನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು .
- ✓ ಹಾಗೆಯೇ , ಕೈಬಿಡಲಾದ ಕಾಮಗಾರಿಗಳ ಪಕ್ರರಣಗಳಲ್ಲಿ , ಈಗಾಗಲೇ ಸೂಚಿಸಿರುವಂತೆ , ಸದರಿ ಏಜೆನ್ಸಿಯಿಂದ ಹಣ ಹಿಂಪಡೆಯುವ ಕ್ರಮಗಳನ್ನೂ ತುರ್ತು ಕೈಗೊಳ್ಳಲು ಸಹ ಜಿಲ್ಲೆಗಳಿಗೆ ಸೂಚಿಸಿದೆ .

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು .

(signature)
ಸಹನಿರ್ದೇಶಕರು[ಶಾಲಾ ಶಿಕ್ಷಣ]

\\10.96.135.22\typing3server\D\Planning\2012 G A MEETING PR-final.docx